ಹೂಳೆತ್ತುವ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಸ್ಪರ್ಧಾತ್ಮಕ ಟೆಂಡರಿನ ಮೂಲಕ ಭಾರತೀಯ ಸರ್ಕಾರದ ಅಧೀನ ಸಂಸ್ಥೆಯಾದ ಮೆ: ಡ್ರೆಡ್ಜಂಗ್ ಕಾರ್ಪೊರೇಷನ್ ಆಫ್ ಇಂಡಿಯಾದವರಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡಲಾಗಿದೆ.

ಇ) ಸದರಿ ಕಾಮಗಾರಿಯು ಕಳಪೆ ಮಟ್ಟದ್ದಲ್ಲ, ಹಾಗೂ ಮೀನುಗಾರಿಕೆ ಯಾಂತ್ರಿಕ ದೋಣಿಗಳಿಗೆ ಯಾವುದೇ ತೊಂದರೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ:- ಅಬಕಾರಿ ಗುತ್ತಿಗೆಯಿಂದ ಬಂದ ಆದಾಯ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 606 (823)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರಕ್ಕೆ ಅಬಕಾರಿ ಗುತ್ತಿಗೆಯಿಂದ ಕಳೆದ ಎರಡು ವರ್ಷಗಳಲ್ಲಿ ಬಂದ ಆದಾಯವೆಷ್ಟು?

ಆ) ರಾಜ್ಯ ಬೊಕ್ಕಸಕ್ಕೆ ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ ಮೊತ್ತವೆಷ್ಟು?

ಇ) ಈ ಮೊತ್ತವು ಎಷ್ಟು ವರ್ಷಗಳಿಂದ ಬಾಕಿ ಇದೆ. ಇದರ ವಸೂಲಾತಿಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) 1996-97ನೇ ಸಾಲಿನಲ್ಲಿ ಅಬಕಾರಿ ಗುತ್ತಿಗೆಯ ನೀಡುವ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಶಾಣಪ್ಪ (ಅಬಕಾರಿ ಸಚಿವರು):-

ಅ) 1. 1994-95 - ರೂ.462.00 ಕೋಟಿಗಳು

2. 1995-96 - ರೂ.487.43 ಕೋಟಿಗಳು

ಆ) ದಿನಾಂಕ 31-3-1996ರ ಅಂತ್ಯಕ್ಕೆ:-

ಅಸಲು	ರೂ. 167.69 ಕೋಟಿಗಳು
ಬಡ್ಡಿ	ರೂ. 112.01 ಕೋಟಿಗಳು
ಒಟ್ಟು	ರೂ. 279.70 ಕೋಟಿಗಳು

ಇ) ಈ ಮೊತ್ತವು 1945-46ನೇ ವರ್ಷದಿಂದ 1995-96 ಮಾರ್ಚ್ ಅಂತ್ಯದವರೆಗೆ

ಬಾಕಿ ಇದೆ. ಬಾಕಿ ವಸೂಲಾತಿಗೆ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. 1995-96ನೇ ಸಾಲಿನಲ್ಲಿ ರೂ.22 ಕೋಟಿಗಳ ಬಾಕಿ ಹಣವನ್ನು ವಸೂಲಿ ಮಾಡಲಾಗಿದೆ.

2. 324 ಪ್ರಕರಣಗಳಲ್ಲಿ ಬಾಕಿದಾರರಿಂದ ಬರಬೇಕಾದ ಬಾಕಿ ಹಣವನ್ನು ಭೂಕಂದಾಯ ಬಾಕಿಯೆಂದು ಪರಿಗಣಿಸಿ ವಸೂಲಿ ಮಾಡಲು ಕ್ರಮ ಜರುಗಿಸಲಾಗಿದೆ.

3. 138 ಪ್ರಕರಣಗಳಲ್ಲಿ ಬಾಕಿ ಹಣದ ವಸೂಲಾತಿಗೆ ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ. ಮೊಕದ್ದಮೆಗಳ ತೀವ್ರ ವಿಲೇವಾರಿಗೆ ಕ್ರಮ ತೆಗೆದುಕೊಳ್ಳಲಾಗಿದೆ.

4. ಕರ್ನಾಟಕ ಅಬಕಾರಿ ಕಾಯಿದೆಯ ಸೆಕ್ಷನ್ 68ಕ್ಕೆ ತಿದ್ದುಪಡಿ ಮಾಡಿ ಅಬಕಾರಿ ಬಾಕಿ ಹಣದ ವಸೂಲಾತಿಗೆ ಸಂಬಂಧಿಸಿದಂತೆ ನ್ಯಾಯಾಲಯ ತಡೆಯಾಜ್ಞೆ ನೀಡದಂತೆ ಅವಕಾಶ ಕಲ್ಪಿಸಲಾಗಿದೆ. ಆದರೆ ಈ ತಿದ್ದುಪಡಿಗೆ ಕರ್ನಾಟಕ ಉಚ್ಚ ನ್ಯಾಯಾಲಯ ತಡೆಯಾಜ್ಞೆ ನೀಡಿರುತ್ತದೆ.

ಈ) ಸರ್ಕಾರವು ಪಾನ ನಿಷೇದ ಕುರಿತು ತೆಗೆದುಕೊಳ್ಳಬಹುದಾದ ಅಂತಿಮ ತೀರ್ಮಾನವನ್ನು ಕಾಯ್ದಿರಿಸಿ, ದಿನಾಂಕ: 1-7-96ರಿಂದ 31-10-96ರವರೆಗೆ ಮಧ್ಯಂತರ ವ್ಯವಸ್ಥೆಯಾಗಿ ಮಾತ್ರ ಈ ಕೆಳಕಂಡ ಷರತ್ತುಗಳ ಮೇರೆಗೆ, ಸಾರಾಯಿ ಮಾರಾಟ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಲು ಕ್ರಮ ತೆಗೆದುಕೊಳ್ಳಲಾಗಿದೆ:-

''1995-96ರ ಬಾಡಿಗೆ ಹಾಗೂ ಅದರ ಮೇಲೆ ಕನಿಷ್ಟ ಶೇಕಡಾ 8ರಷ್ಟು ಹೆಚ್ಚಳವನ್ನು ಪ್ರತಿ ತಾಲ್ಲೂಕು:ಘಟಕಗಳಿಂದ ಪಡೆಯುವ ಷರತ್ತಿನ ಮೇರೆಗೆ ಹಾಲಿ ಇರುವ ಗುತ್ತಿಗೆದಾರರಿಗೆ ಸದರಿ ನಾಲ್ಕು ತಿಂಗಳುಗಳಿಗೆ ಗುತ್ತಿಗೆ ವಹಿಸುವುದು. ಒಂದು ವೇಳೆ ಪ್ರಸ್ತುತ ಗುತ್ತಿಗೆದಾರರು ಇದಕ್ಕೆ ಒಪ್ಪದಿದ್ದಲ್ಲಿ, ಬೇರೆ ಗುತ್ತಿಗೆದಾರರಿಗೆ ಅದೇ ಷರತ್ತುಗಳ ಅನ್ವಯ ಗುತ್ತಿಗೆ ವಹಿಸುವುದು. ಆದಾಗ್ಯೂ 1995-96ರ ಬಾಡಿಗೆ ಹಾಗೂ ಅದರ ಮೇಲೆ ಕನಿಷ್ಟ ಶೇಕಡ 8ರಷ್ಟು ಹೆಚ್ಚಳ ಪ್ರತಿ ತಾಲ್ಲೂಕು ಘಟಕ:ಪ್ರದೇಶದಿಂದ ಪಡೆಯಲು ಯಾವ ಜಿಲ್ಲೆಯಲ್ಲಿ ಸಾಧ್ಯವಿಲ್ಲವೋ ಆ ಇಡೀ ಜಿಲ್ಲೆಯ ಒಟ್ಟಾರೆ ಬಾಡಿಗೆ ಮೊತ್ತ ಈ ನಾಲ್ಕು ತಿಂಗಳುಗಳಿಗೆ 1995-96ರ ಬಾಡಿಗೆ ಮೇಲೆ ಶೇಕಡ 8ರಷ್ಟು ಹೆಚ್ಚಿಗೆ ಇದ್ದಲ್ಲಿ ಆಯಾ ಜಿಲ್ಲೆಯ ಪ್ರತಿ ತಾಲ್ಲೂಕು:ಘಟಕ:ಪ್ರದೇಶದ ಗುತ್ತಿಗೆಯನ್ನು ಗುತ್ತಿಗೆದಾರರಿಗೆ ಅವರೊಡನೆ ಮಾಡಿಕೊಂಡ ಹೆಚ್ಚುವರಿ ದರದಲ್ಲಿ ವಹಿಸಿಕೊಡಬಹುದು.''

ವಿಷಯ:- ದ.ಕ.ಜಿಲ್ಲೆಯಲ್ಲಿ ವೈಜ್ಞಾನಿಕ ಪಾರ್ಕ್‌ಗಳ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 607 (1062)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ):- ಮಾನ್ಯ ಪರಿಸರ ಜೀವಿಶಾಸ್ತ್ರ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಅಸಂಪ್ರದಾಯಕ ಇಂಧನ ಮೂಲಗಳ ಸಚಿವರು ಈ